ಓಎಸ್.42/2017
ಪಿಡಬ್ಲ್ಯೂ-1

ದಿನಾಂಕ 17-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ- 8 ನೇ ಪ್ರತಿವಾದಿ ಪರ ವಕೀಲರಿಂದಃ-

ನಾನು ಕೊಕ್ಕಂಡ ಕುಟುಂಬದ ಕುಳ ನಂ.3 ಕ್ಕೆ ಸೇರಿದವನು. ಕುಳ ನಂ.3 ರಲ್ಲಿ ನಮ್ಮ ಅಜ್ಜಂದಿರು 4 ಜನರಿದ್ದರು ಎಂದರೆ ನಿಜ. 4 ಜನರ ಒಟ್ಟು ಕುಟುಂಬದ ಆಸ್ತಿಗಳು 1947 ರಲ್ಲಿ ಪಾಲಾಗಿ ಅವರವರ ಸ್ವಾಧೀನದಲ್ಲಿ ಇವೆ ಎಂದರೆ ನಿಜ. 1947 ರಲ್ಲಿ ಪಾಲಾದ ಆಸ್ತಿಯಲ್ಲಿ ನನ್ನ ತಂದೆ ಅಪ್ಪಚ್ಚುರವರಿಗೆ ಬಂದ ಆಸ್ತಿಗಳನ್ನು ಮೊದಲ ಬಾರಿ 1984 ರಲ್ಲಿ ಮತ್ತು 2 ನೇ ಬಾರಿ 1999 ರಲ್ಲಿ ನಮ್ಮಗಳ ಮಧ್ಯೆ ಪಾಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಪ್ಪಚ್ಚುರವರಿಗೆ ಒಟ್ಟು 7 ಜನ ಮಕ್ಕಳು. ಸದರಿ 7 ಜನರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನ್ನ ಅಕ್ಕತಂಗಿಯರು ನಮಗೇನು ಭಾಗ ಬೇಡ ಎಂದು ಹೇಳಿದರು ಆದಕಾರಣ ದಾವೆಯಲ್ಲಿ ಸೇರಿಸಿಲ್ಲ. ನನ್ನ ಸ್ವಾಧೀನದಲ್ಲಿರುವ ನನ್ನ ತಂದೆಯ ಆಸ್ತಿಯನ್ನು 2 ನೇ ವಾದಿ ನೋಡಿಕೊಳ್ಳುತ್ತಿದ್ದಾರೆ. ದಾವಾಸ್ತಿಗಳಲ್ಲಿ ಸರಿಯಾಗಿ ಪಾಲಾಗಿಲ್ಲ.

ಯಾವ ಆಧಾರದ ಮೇಲೆ ದಾವಾಸ್ತಿಯ ಕೆಲವು ಆಸ್ತಿಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದೇವೆ ಎಂದು ಗೊತ್ತಿಲ್ಲ. ನನ್ನ ತಂದೆಯ ಕಾಲದಲ್ಲಿಯೇ ಆರ್.ಟಿ.ಸಿ ವರ್ಗಾವಣೆಯಾಗಿದೆ. ಸರ್ವೆ ನಂ.180/3, 178/1 ರ ಆಸ್ತಿಗಳ ಮೇಲೆ ವಿರಾಜಪೇಟೆಯ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದ ಕಾರಣ ಅವರೆಡೂ ಆಸ್ತಿಗಳನ್ನು ಬಿಟ್ಟು ಉಳಿದ ಆಸ್ತಿಗಳನ್ನು ಪಾಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಒಟ್ಟು ಕುಟುಂಬದ ಆಸ್ತಿಗಳು ಎಲ್ಲಾ ಪಾಲಾಗಿವೆ ನಮ್ಮ ನಮ್ಮ ಸ್ವಾಧೀನದಲ್ಲಿ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಸರ್ವೆ ನಂ.180/3, 178/1 ಈ ಎರಡೂ ಆಸ್ತಿಗಳು ನಮ್ಮವಾ ಎಂದು ಗೊತ್ತಿಲ್ಲ, ದಾಖಲೆ ನೋಡಿದರೆ ಗೊತ್ತಾಗುತ್ತದೆ. ಸರ್ವೆ ನಂ.180/3, 178/1 ರಲ್ಲಿ ನನ್ನ ತಂದೆಗೆ 4 ರಲ್ಲಿ ಒಂದು ಭಾಗ ಬರಬೇಕು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ನನಗೆ ಕಿರುಕುಳ ಕೊಟ್ಟಿಲ್ಲ. ಆದರೆ ಪಾಲನ್ನು ಸಹ ಕೊಟ್ಟಿಲ್ಲ. 1 ಮತ್ತು 8 ನೇ ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದಪತ್ರವನ್ನು ನಾನು ಓದಿಲ್ಲ. 2 ನೇ ಪ್ರತಿವಾದಿ ಕೊಕ್ಕಂಡ ಪಾರ್ವತಿ ಯಾರು ಎಂದು ಗೊತ್ತಿಲ್ಲ. 1980 ರಲ್ಲಿ ಕೊಕ್ಕಂಡ ಪಾರ್ವತಿರವರು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕೊಕ್ಕಂಡ ದೇವಯ್ಯನವರು ನನಗೆ ಗೊತ್ತು. ಅವರ ಹೆಂಡತಿಯ ಹೆಸರು

ಗೊತ್ತಿಲ್ಲ. ಕೊಕ್ಕಂಡ ದೇವಯ್ಯ ಮತ್ತು ಕೊಕ್ಕಂಡ ಪಾರ್ವತಿಯವರಿಗೆ 8 ಜನ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ತನ್ನ ಪ್ರತಿವಾದಪತ್ರದಲ್ಲಿ ವಂಶಾವಳಿಯನ್ನು ಕೊಟ್ಟಿದ್ದು ನಾನು ಅದನ್ನು ತಿಳಿಯದೆ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮೃತರಾದರೆಂದು ಗೊತ್ತಿದ್ದರೂ ಅವರ ವಿರುದ್ಧ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಕೊಕ್ಕಂಡ ಮಾಚಯ್ಯ ಎನ್ನುವವರು ಆ ಕುಟುಂಬದಲ್ಲಿ ಯಾರು ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.

ಸಹಿ:

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)